**ಓ ಎಸ್ ನಂಃ 138-17**
**ಪಿ ಡಬ್ಲ್ಯೂ ಃ 2**

**ದಿಃ 02-12-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ ಕೆ ಎಂ ವಕೀಲರಿಂದ**

**17. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

**18.** ನಾನು ದಿನಾಂಕಃ **08-01-1970** ನೊಂದಾಯಿತ ವಿಭಾಗ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ **1** ಎಂದು ಗುರುತಿಸಲಾಯಿತು. ನಿಪಿ **1** ರ ಮೂಲ ಪ್ರತಿ ನನ್ನ ತಂದೆಯ ದೊಡ್ಡ ಅಣ್ಣ ಪುಟ್ಟತಿಮ್ಮರಾಯಪ್ಪ ಅವರ ಕಡೆ ಇರುತ್ತದೆ. ಪ್ರತಿವಾದಿ ಪರ ವಕೀಲರು ನಿಪಿ **1** ರ ಬಗ್ಗೆ ವಾದ ಪತ್ರದಲ್ಲಿ ಹೇಳಿಲ್ಲ ಎಂದು ಹೇಳಿದ್ದರಿಂದ ನಿಪಿ**1** ನ್ನು ಪ್ರತಿವಾದಿ ಪರ ವಕೀಲರ ಈ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ನಾನು ದಿನಾಂಕಃ **23-03-1971** ರ ಎಕ್ಸ್ ಚೆಂಜ್ ಡಿಡಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯ ಮೂಲ ಪ್ರತಿ ನನ್ನ ತಂದೆಯ ತಾಯಿಯಾದ ನಂಜಮ್ಮರವರ ಬಳಿ ಇರುತ್ತದೆ ಎಂದು ಹೇಳಿದ್ದರಿಂದ ಅದನ್ನು ನಿಪಿ **2** ಎಂದು ಗುರುತಿಸಲಾಯಿತು. ನಾನು ಮ್ಯುಟೇಷನ್ ರಿಜಿಸ್ಟ್ರರ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ**3** ಎಂದು ಗುರುತಿಸಲಾಯಿತು. ನಾನು ಒಟ್ಟು **10** ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ **4** ರಿಂದ **13** ಎಂದು ಗುರುತಿಸಲಾಯಿತು. ನಾನು ಹಿಸ್ಸಾ ಸರ್ವೆ ಸ್ಕೆಚ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ **14** ಎಂದು ಗುರುತಿಸಲಾಯಿತು. ನಾನು ಆಕಾರ್ ಬಂದಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ **15** ಎಂದು ಗುರುತಿಸಲಾಯಿತು. ನಾನು ಜಮೀನಿನ ಹಿಡುವಳಿ ಸರ್ಟಿಫಿಕೇಟ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ **15** ಎಂದು ಗುರುತಿಸಲಾಯಿತು. ನಾನು ದಿನಾಂಕಃ **12-06-2016** ರ ಮ್ಯುಟೇಷನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **17** ಎಂದು ಗುರುತಿಸಲಾಯಿತು. ನಾನು ಸರ್ವೆ ನಂಬರ್ **62/5** ರ ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **18** ಎಂದು ಗುರುತಿಸಲಾಯಿತು. ನಾನು ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **19** ಎಂದು ಗುರುತಿಸಲಾಯಿತು. ನಾನು ಪಟ್ಟಾ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು ನಿಪಿ **20** ಎಂದು ಗುರುತಿಸಲಾಯಿತು. ನಾನು ದಿನಾಂಕಃ **11-04-2016** ರ ಎಡಿಎಲ್‌ಆರ್ ಅವರ ಆದೇಶದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ **21** ಎಂದು ಗುರುತಿಸಲಾಯಿತು. ನಾನು ಸರ್ವೆ ರಿಪೋರ್ಟಿನ

(4 ಪುಟಗಳು) ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 22 ಎಂದು ಗುರುತಿಸಲಾಯಿತು. ನಾನು ಫಿರ್ಯಾದಿಯ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 23 ಎಂದು ಗುರುತಿಸಲಾಯಿತು. ನಾನು ದಿನಾಂಕಃ 10-12-2004 ರ ನೊಂದಾಯಿತ ಖರೀದಿ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಇದರ ಮೂಲ ಪ್ರತಿ ಪ್ರತಿವಾದಿಯ ಕಡೆ ಇರುತ್ತದೆ ಎಂದು ಹೇಳಿದ್ದರಿಂದ ಅದನ್ನು ನಿಪಿ 24 ಎಂದು ಗುರುತಿಸಲಾಯಿತು. ನಾನು 4 ಫೋಟೋಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 25 ರಿಂದ 28 ಎಂದು ಗುರುತಿಸಲಾಯಿತು. ನಾನು ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 29 ಎಂದು ಗುರುತಿಸಲಾಯಿತು. ನಾನು ನಕಾಶೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 30 ಎಂದು ಗುರುತಿಸಲಾಯಿತು. ನಾನು ದಿನಾಂಕಃ 08-01-2020 ರ ಮುಕ್ತರು ನಾಮೆ ಹಾಜರುಪಡಿಸಿದ್ದು ಅದನ್ನು ನಿಪಿ 31 ಎಂದು ಗುರುತಿಲಾಯಿತು.
ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**